## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.396/2024

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ರವಿ ಎನ್. ಎಸ್ | CW: 17 | PW: 7 |
| ತಂದೆಯ ಹೆಸರು | : | ಶಿವಮೂರ್ತ್ಯಪ್ಪ | | |
| ವಯಸ್ಸು | : | 42 | | |
| ವೃತ್ತಿ | : | ಪಿಐ, ನ್ಯಾಮತಿ ಪೋಲೀಸ್ ಠಾಣೆ | | |
| ವಾಸಸ್ಥಳ | : | ನ್ಯಾಮತಿ | | |

ದಿನಾಂಕಃ 07.03.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ

ನಾನು ಆಗಸ್ಟ್ 2023 ರಿಂದ ಇಲ್ಲಿಯ ತನಕ ನ್ಯಾಮತಿ ಪೋಲೀಸ್ ಠಾಣೆಯಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 22.02.2024 ರಂದು ಈ ಕೇಸಿನ ಕಡತವನ್ನು ಚಾಸಾ 16 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ರಾತ್ರಿ 7 ಗಂಟೆಗೆ ಶಿವಮೊಗ್ಗದ ಮೆಗ್ಗಾನ್ ಶವಾಗಾರಕ್ಕೆ ಹೋಗಿ ಅಪಘಾತದಲ್ಲಿ ಮೃತಪಟ್ಟ ಏಳುಮಲೈ ರವರ ಶವ ಪಂಚನಾಮೆಯನ್ನು ಚಾಸಾ 2 ಮತ್ತು 3 ರ ಸಮಕ್ಷಮ ರಾತ್ರಿ 7 ರಿಂದ 8.30 ರವರೆಗೆ ಜರುಗಿಸಿ, ಚಾಸಾ 4 ರಿಂದ 6 ರವರ ಹೇಳಿಕೆಗಳನ್ನು ಪಡೇದುಕೊಂಡಿರುತ್ತೇನೆ.

ದಿಃ 23.02.2024 ರಂದು ಸಂಜೆ 4.30 ರ ಸಮಯದಲ್ಲಿ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 7 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ10 ಮತ್ತು 11 ರವರ ಸಮಕ್ಷಮ ಸಂಜೆ 4.30 ರಿಂದ 5.15 ರ ಸಮಯದಲ್ಲಿ ಸ್ಥಳ ಪಂಚನಾಮೆ ತಯಾರಿಸಿ, ಕಚ್ಚಾ ನಕಾಶೆ ತಯಾರಿಸಿ, ಪೊಟೋಗಳನ್ನು ತೆಗೆಸಿರುತ್ತೇನೆ. ಅದೇ ದಿನ ಸವಳಂಗ ಉಪ ಪೊಲೀಸ್ ಠಾಣೆಯಲ್ಲಿ ಅಪಘಾತಕಕ್ಕೊಳಗಾದ ವಾಹನಗಳ ಅಮಾನತ್ತು ಪಂಚನಾಮೆಯನ್ನು ಚಾಸಾ 10 ಮತ್ತು 11 ರವರ ಸಮಕ್ಷಮ ಸಂಜೆ 5.30 ರಿಂದ 6.15 ರ ಸಮಯದಲ್ಲಿ ಜರುಗಿಸಿ , ಕೆಎ 14 ಬಿ 8467 ನಂಬರ್ ನ ಎರಟಿಗ ಕಾರು ಹಾಗೂ ಕೆಎ 17 ಇಎಲ್ 8741 ನಂಬರ್ ನ ಹೆಚ್ ಪಿ ಡಿಲಕ್ಸ್ ಬೈಕ್ ನ್ನು ಅಮಾನುತ್ತುಪಡಿಸಿಕೊಂಡು ಪೊಟೋಗಳನ್ನು ತೆಗೆಸಿರುತ್ತೇನೆ.

ದಿಃ 26.02.2024 ರಂದು ಚಾಸಾ 12 ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಅಪಘಾತಕ್ಕೊಳಗಾದ ಕಾರಿನ ಮಾಲೀಕರಾದ 1 ನೇ ಆರೋಪಿಯು ಠಾಣೆಗೆ ಹಾಜರಿದ್ದು ದಸ್ತಗಿರಿ ಕ್ರಮ ಜರುಗಿಸಿ, ಠಾಣಾ ಜಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಕಾರಿನ ದಾಖಲಾತಿಗಳ ಮಾಹಿತಿ ಕೋರಿ ಅವರಿಗೆ ಪೋಲೀಸ್ ನೋಟೀಸ್ ಜಾರಿ ಮಾಡಿ ಅವರಿಂದ ಸಮಜಾಯಿಷಿಕೆ ಮತ್ತು ಇಂಡಿಮಿನಿಟಿಬಾಂಡ್ ಪಡೆದುಕೊಂಡು ಸದರಿ ಕಾರನ್ನು ಬಿಡುಗಡೆ ಮಾಡಿರುತ್ತೇನೆ. ದಿಃ 14.03.2024 ರಂದು ಚಾಸಾ 13 ರವರಿಂದ ಮೃತನ ಪಿಎಂ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 20.04.2024 ರಂದು ಅಪಘಾತಕ್ಕೊಳಪಟ್ಟ ಬೈಕ್ ನ ಮಾಲೀಕರಾದ ಚಾಸಾ 1 ರವರಿಗೆ ಪೋಲೀಸ್ ನೋಟೀಸ್ ಜಾರಿ ಮಾಡಿ ಅವರಿಂದ ಸಮಜಾಯಿಷಿಕೆಯನ್ನು ಪಡೆದುಕೊಂಡು ಸದರಿ ಬೈಕ್ ಗೆ ವಿಮೆ ಇಲ್ಲದ ಕಾರಣ ಬೈಕ್ ನ್ನು ಅಮಾನತ್ತುಪಡಿಸಿಕೊಂಡು ಮಾಲುಪಟ್ಟಿ ಯಲ್ಲಿ ಸೇರಿಸಿರುತ್ತೇನೆ. ಪೊಟೋಗಳಿಗೆ ಸಂಬಂಧಿಸಿದ 65 ಬಿ ಪ್ರಮಾಣ ಪತ್ರವನ್ನು ಚಾಸಾ 15 ರವರಿಂದ ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನಿಪಿ 2 ಸ್ಥಳ ಪಂಚನಾಮೆ, ನಿಪಿ 3 ಕಚ್ಛಾ ನಕಾಶೆ, ನಿಪಿ 4 ವಾಹನ ಪಂಚನಾಮೆಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ 2(ಬಿ), 3(ಬಿ), 4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 5 ರಿಂದ 10 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಶವ ತನಿಖಾ ವರದಿಯನ್ನು ನಿಪಿ 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು, ಪಿಎಂ ವರದಿಯನ್ನು ನಿಪಿ 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ 16(ಎ) ಎಂದು, ಐಎಂವಿ ವರದಿಯನ್ನು ನಿಪಿ 17 ಎಂದು, ಸಾಕ್ಷಿಯ ಸಹಿಯನ್ನು ನಿಪಿ 17(ಎ) ಎಂದು, 1 ನೇ ಆರೋಪಿಗೆ ನೀಡಿದ ಪೋಲೀಸ್ ನೋಟೀಸ್ ಅವರಿಂದ ಪಡೆದುಕೊಂಡ ಸಮಜಾಯಿಷಿಕೆ ಮತ್ತು ಇಂಡಿಮಿನಿಟಿ ಬಾಂಡ್ ನ್ನು ನಿಪಿ 18 ರಿಂದ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ 18(ಎ) ಮತ್ತು 20(ಎ) ಎಂದು, ಚಾಸಾ 1 ರವರಿಗೆ ಪೋಲೀಸ್ ನೋಟೀಸ್ ಮತ್ತು ಅವರಿಂದ ಪಡೆದುಕೊಂಡ ಸಮಜಾಯಿಷಿಕೆಯನ್ನು ನಿಪಿ 21 ಮತ್ತು 22 ಎಂದು, ಸಾಕ್ಷಿಯ ಸಹಿಯನ್ನು ನಿಪಿ 21(ಎ) ಮತ್ತು 22(ಎ) ಎಂದು, 65 ಬಿ ಪ್ರಮಾಣ ಪತ್ರವನ್ನು ನಿಪಿ 23 ಎಂದು, ಸಾಕ್ಷಿಯ ಸಹಿಯನ್ನು ನಿಪಿ 23(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಸ್ ಬಿ ಪಿ ವಕೀಲರಿಂದಃ-

ದಿಃ 22.02.2024 ರಂದು ಈ ಕೇಸಿನ ಕಡತವನ್ನು ಚಾಸಾ 16 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ದಿನ ರಾತ್ರಿ 7 ಗಂಟೆಗೆ ಶಿವಮೊಗ್ಗದ ಮೆಗ್ಗಾನ್ ಶವಾಗಾರಕ್ಕೆ ಹೋಗಿ ಅಪಘಾತದಲ್ಲಿ ಮೃತಪಟ್ಟ ಏಳುಮಲೈ ರವರ ಶವ ಪಂಚನಾಮೆಯನ್ನು ಚಾಸಾ 2 ಮತ್ತು 3 ರ ಸಮಕ್ಷಮ ರಾತ್ರಿ 7 ರಿಂದ 8.30 ರವರೆಗೆ ಜರುಗಿಸಿ, ಚಾಸಾ 4 ರಿಂದ 6 ರವರ ಹೇಳಿಕೆಗಳನ್ನು

ಪಡೇದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಿಃ 23.02.2024 ರಂದು ಸಂಜೆ 4.30 ರ ಸಮಯದಲ್ಲಿ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 7 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ10 ಮತ್ತು 11 ರವರ ಸಮಕ್ಷು ಸಂಜೆ 4.30 ರಿಂದ 5.15 ರ ಸಮಯದಲ್ಲಿ ಸ್ಥಳ ಪಂಚನಾಮೆ ತಯಾರಿಸಿ, ಕಚ್ಚಾ ನಕಾಶೆ ತಯಾರಿಸಿ , ಪೊಟೋಗಳನ್ನು ತೆಗೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ದಿನ ಸವಳಂಗ ಉಪ ಪೊಲೀಸ್ ಠಾಣೆಯಲ್ಲಿ ಅಪಘಾತಕಕ್ಕೊಳಗಾದ ವಾಹನಗಳ ಅಮಾನತ್ತು ಪಂಚನಾಮೆಯನ್ನು ಚಾಸಾ 10 ಮತ್ತು 11 ರವರ ಸಮಕ್ಷಮ ಸಂಜೆ 5.30 ರಿಂದ 6.15 ರ ಸಮಯದಲ್ಲಿ ಜರುಗಿಸಿ , ಕೆಎ 14 ಬಿ 8467 ನಂಬರ್ ನ ಎರಟಿಗ ಕಾರು ಹಾಗೂ ಕೆಎ 17 ಇಎಲ್ 8741 ನಂಬರ್ ನ ಹೆಚ್ ಪಿ ಡಿಲಕ್ಸ್ ಬೈಕ್ ನ್ನು ಅಮಾನುತ್ತುಪಡಿಸಿಕೊಂಡು ಪೊಟೋಗಳನ್ನು ತೆಗೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಿಃ 26.02.2024 ರಂದು ಚಾಸಾ 12 ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ದಿನ ಅಪಘಾತಕ್ಕೊಳಗಾದ ಕಾರಿನ ಮಾಲೀಕರಾದ 1 ನೇಆರೋಪಿಯು ಠಾಣೆಗೆ ಹಾಜರಿದ್ದು ದಸ್ತಗಿರಿ ಕ್ರಮ ಜರುಗಿಸಿ, ಠಾಣಾ ಜಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕಾರಿನ ದಾಖಲಾತಿಗಳ ಮಾಹಿತಿ ಕೋರಿ ಅವರಿಗೆ ಪೋಲೀಸ್ ನೋಟೀಸ್ ಜಾರಿ ಮಾಡಿ ಅವರಿಂದ ಸಮಜಾಯಿಷಿಕೆ ಮತ್ತು ಇಂಡಿಮಿನಿಟಿಬಾಂಡ್ ಪಡೆದುಕೊಂಡು ಸದರಿ ಕಾರನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 14.03.2024 ರಂದು ಚಾಸಾ 13 ರವರಿಂದ ಮೃತನ ಪಿಎಂ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 20.04.2024 ರಂದು ಅಪಘಾತಕ್ಕೊಳಪಟ್ಟ ಬೈಕ್ ನ ಮಾಲೀಕರಾದ ಚಾಸಾ 1 ರವರಿಗೆ ಪೋಲೀಸ್ ನೋಟೀಸ್

ಜಾರಿ ಮಾಡಿ ಅವರಿಂದ ಸಮಜಾಯಿ

ಷಿಕೆಯನ್ನು ಪಡೆದುಕೊಂಡು ಸದರಿ ಬೈಕ್ ಗೆ ವಿಮೆ ಇಲ್ಲದ ಕಾರಣ ಬೈಕ್ ನ್ನು ಅಮಾನತ್ತುಪಡಿಸಿಕೊಂಡು ಮಾಲುಪಟ್ಟಿ ಯಲ್ಲಿ ಸೇರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಟೋಗಳಿಗೆ ಸಂಬಂಧಿಸಿದ 65 ಬಿ ಪ್ರಮಾಣ ಪತ್ರವನ್ನು

ಚಾಸಾ 15 ರವರಿಂದ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.